ಓ.ಎಸ್. ನಂ. **146/2022** ಪಿ.ಡಬ್ಲ್ಯೂ- **1**

<u>ಸಾಕ್ಷಿಯನ್ನು ದಿನಾಂಕ **17.3.2023** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಕೆತ್ವಾರ್ ನಕಲನ್ನು ನಿಪಿ1 ಎಂದು, ಆರ್.ಆರ್-5 ಮತ್ತು ಆರ್.ಆರ್-6 ರ ನಕಲನ್ನು ನಿಪಿ2 ರಿಂದ ನಿಪಿ5 ಎಂದು, ಆಕಾರ ಬಂಧು ನಕಲನ್ನು ನಿಪಿ6 ಎಂದು, ದಿನಾಂಕ 18.7.1936 ರ ಕ್ರಯಪತ್ರದ ನಕಲನ್ನು ನಿಪಿ7 ಎಂದು, ಮೂರು ಇ.ಸಿ ಗಳನ್ನು ನಿಪಿ8 ರಿಂದ ನಿಪಿ10 ಎಂದು, ತಹಶೀಲ್ದಾರ್‌ರವರು ನೀಡಿದ ಹಿಂಬರಹವನ್ನು ನಿಪಿ11 ಎಂದು, ಸರ್ವೆ ನಂ.20/1 ರ ಐದು ಪಹಣಿಯ ನಕಲುಗಳನ್ನು ನಿಪಿ12 ರಿಂದ ನಿಪಿ16 ಎಂದು, 20/2 ರ ಐದು ಪಹಣಿಯ ನಕಲುಗಳನ್ನು ನಿಪಿ17 ರಿಂದ ನಿಪಿ21 ಎಂದು,ಜಿಲ್ಲಾಧಿಕಾರಿರವರಿಗೆ ಸಲ್ಲಿಸಿದ ಅಪೀಲು ಮೆಮೋ ಮತ್ತು ಆದೇಶದ ನಕಲನ್ನು ನಿಪಿ22 ಮತ್ತು ನಿಪಿ23 ಎಂದು, ದಿನಾಂಕ 28.12.1974 ರ ವಿಭಾಗ ಪತ್ರದ ನಕಲನ್ನು ನಿಪಿ24 ಎಂದು, ದಿನಾಂಕ 13.1.2013 ರ ಕ್ರಯಪತ್ರದ ನಕಲನ್ನು ನಿಪಿ25 ಎಂದು, ಸರ್ವೆ ನಂ.20 ರ ಹಿಸ್ಸಾ ಟಿಪ್ಪಣಿ, ಅಟ್ಲಾಸ್, ಕರ್ದ ನಕಲನ್ನು ನಿಪಿ26 ರಿಂದ ನಿಪಿ28 ಎಂದು, ಸರ್ವೆ ನಂ.21 ರ ಹಿಸ್ಸಾ ಮತ್ತು ಆರ್.ಆರ್ ಪಕ್ಕಾ ನಕಲನ್ನು ನಿಪಿ29 ಮತ್ತು ನಿಪಿ31 ಎಂದು, ಸರ್ವೆ ನಂ.20/1 ಮತ್ತು 20/2 ರ ಪಹಣಿಯನ್ನು ನಿಪಿ32 ಮತ್ತು ನಿಪಿ33 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಮುಂದೂಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.